# Akashvani : Bangalore
# Regional Bulletin In Kannada

ಆಕಾಶವಾಣಿ ಬೆಂಗಳೂರು

ಪ್ರದೇಶ ಸಮಾಚಾರ

**09.12.2024** **14.30 hrs**

**<><*<><>*><>**

ಮುಖ್ಯಾಂಶಗಳು

- **೧. ಬೆಳಗಾವಿ ಸುವರ್ಣಸೌಧದಲ್ಲಿ ವಿಧಾನಮಂಡಲದ ಚಳಿಗಾಲದ ಅಧಿವೇಶನ ಆರಂಭ;**
- **೨. ಇದೇ ೧೧ ಮತ್ತು ೧೨ ರಂದು 'ಸ್ಟಾರ್ಟ್ ಇಂಡಿಯಾ ಹ್ಯಾಕಥಾನ್' ಆಯೋಜನೆ; ಮೈಸೂರು ಬೆಳಗಾವಿಯಲ್ಲಿ ನೋಡಲ್ ಕೇಂದ್ರಗಳು**
- **೩. ರಾಜ್ಯಾದ್ಯಂತ ೧ ರಿಂದ ೧೯ ವಯೋಮಾನದ ಮಕ್ಕಳಿಗೆ ಜಂತುಹುಳು ನಿವಾರಣೆ ಮಾತ್ರೆಗಳ ವಿತರಣೆ**

**<><*<><>*><>**

ರಾಜ್ಯ ವಿಧಾನಮಂಡಲದ ಉಭಯ ಸದನಗಳ ಚಳಿಗಾಲದ ಅಧಿವೇಶನ ಬೆಳಗಾವಿಯ ಸುವರ್ಣಸೌಧದಲ್ಲಿ ಇಂದಿನಿಂದ ಆರಂಭವಾಗಿದೆ. ಉಭಯ ಸದನಗಳಲ್ಲಿ 'ವಂದೇ ಮಾತರಂ' ಗಾಯನದೊಂದಿಗೆ ಕಲಾಪಗಳನ್ನು ಆರಂಭಿಸಲಾಯಿತು. ನಂತರ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು. ವಾಡಿಕೆಯಂತೆ ಕಳೆದ ಅಧಿವೇಶನ ಮುಕ್ತಾಯದ ನಂತರ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸುವ ನಿರ್ಣಯವನ್ನು ಉಭಯ ಸದನಗಳಲ್ಲಿ ಮಂಡಿಸಲಾಯಿತು. ಇತ್ತೀಚಿನ ವಿಧಾನಸಭೆ ಉಪಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್ ಪಕ್ಷದ ಮೂವರು ನೂತನ ಸದಸ್ಯರು ಪ್ರಮಾಣವಚನ ಸ್ವೀಕರಿಸಿದರು. ಸಂಡೂರು ಕ್ಷೇತ್ರದಿಂದ ಆಯ್ಕೆಯಾದ ಅನ್ನಪೂರ್ಣ ತುಕಾರಾಮ್, ಶಿಗ್ಗಾಂವಿ ಕ್ಷೇತ್ರದಿಂದ ಆಯ್ಕೆಯಾದ ಪಠಾಣ್ ಯಾಸೀರ್ ಅಹಮ್ಮದ್ ಖಾನ್ ಮತ್ತು ಚನ್ನಪಟ್ಟಣ ಕ್ಷೇತ್ರದಿಂದ ಆಯ್ಕೆಯಾಗಿರುವ ಸಿ.ಪಿ.ಯೋಗೀಶ್ವರ್ ಪ್ರಮಾಣವಚನ ಸ್ವೀಕರಿಸಿದರು. ನೂತನ ಸದಸ್ಯರನ್ನು ಪಕ್ಷದ ಹಿರಿಯ ಸದಸ್ಯರು ಅಭಿನಂದಿಸಿದರು. ಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ವಿಧಾನಸಭೆಯ ಉಪಚುನಾವಣೆ ವಿಚಾರ ಈಗ ಮುಗಿದಿದ್ದು, ಟಿವಿ ಚಾನಲ್ ಬದಲಾಯಿಸುವಂತೆ ನಾವೀಗ ರಾಜಕೀಯ ಚರ್ಚೆ ಕೈಬಿಟ್ಟು ಅಭಿವೃದ್ಧಿ ವಿಚಾರಗಳ ಬಗ್ಗೆ ಗಮನಹರಿಸಬೇಕು ಎಂದು ಹೇಳಿದರು.

ಬಳಿಕ ಪ್ರಶ್ನೋತ್ತರ ಕಲಾಪ ಮುಂದುವರಿಯಿತು.

ಸದಸ್ಯ ಧೀರೇಂದ್ರ ಅವರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧುಬಂಗಾರಪ್ಪ, ಅತಿಥಿ ಶಿಕ್ಷಕರ ಸಂಬಳ ಹೆಚ್ಚಳಕ್ಕೆ ಮುಂದಿನ ದಿನಗಳಲ್ಲಿ ಕ್ರಮವಹಿಸಲಾಗುವುದು. ೨೦೨೨ ರಲ್ಲಿ ಅತಿಥಿ ಶಿಕ್ಷಕರ ಸಂಬಳ ಹೆಚ್ಚಳ ಮಾಡಲಾಗಿದ್ದು, ಈಗ  ಮತ್ತೊಮ್ಮೆ ಆರ್ಥಿಕ ಇಲಾಖೆಯ ಅನುಮೋದನೆಗೆ ಕಳುಹಿಸಲಾಗಿದೆ ಎಂದು ಮಾಹಿತಿ ನೀಡಿದರು. ಸದಸ್ಯ ಕೆ. ತಿಪ್ಪೇಸ್ವಾಮಿ ಅವರ ಪ್ರಶ್ನೆಯೊಂದಕ್ಕೆ ಉತ್ತರಿಸಿದ  ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರ ಖಾತೆ ಸಚಿವ ಕೆ.ಎಚ್. ಮುನಿಯಪ್ಪ, ರಾಜ್ಯದಲ್ಲಿ ಯಾವುದೇ ಬಿಪಿಎಲ್ ಕಾರ್ಡ್ ಗಳನ್ನು ರದ್ದು ಮಾಡವುದಿಲ್ಲ ಬದಲಿಗೆ ಎಪಿಎಲ್ ಕಾರ್ಡ್ ಗೆ ಪರಿಷ್ಕರಣೆ ಮಾಡಲಾಗುವುದು ಎಂದು ತಿಳಿಸಿದರು. ಒಂದು ಲಕ್ಷದ ೨೦ ಸಾವಿರಕ್ಕಿಂತ ಅಧಿಕ ಆದಾಯ, ತೆರಿಗೆ ಪಾವತಿಸುತ್ತಿರುವವರ ಬಿಪಿಎಲ್ ಕಾರ್ಡ್ ಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ .ರಾಜ್ಯದಲ್ಲಿ ಆಹಾರ ಭದ್ರತಾ ಕಾಯ್ದೆಯನ್ವಯ ಅಂತ್ಯೋದಯ ಪಡಿತರ ಚೀಟಿಗೆ ತಲಾ ೩೫ ಕೆಜಿ ಅಕ್ಕಿ ಮತ್ತು ಆದ್ಯತಾ ಪಡಿತರ ಚೀಟಿಗೆ ಪ್ರತಿ ವ್ಯಕ್ತಿಗೆ ೫ ಕೆಜಿ ಅಕ್ಕಿ ವಿತರಿಸಲಾಗುತ್ತಿದೆ. ೨೦೨೨ರ ಡಿಸೆಂಬರ್ ಮಾಹೆಯಲ್ಲಿ ೩ ಕೆಜಿ ಅಕ್ಕಿ ಮತ್ತು ೨ ಕೆಜಿ ರಾಗಿ ಕೊಡಲಾಗುತ್ತಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ೧ ಕೋಟಿ ೨ ಲಕ್ಷ ಕುಟುಂಬಗಳಿಗೆ ೫ ಕೆಜಿ ಅಕ್ಕಿ ವಿತರಿಸಲಾಗುತ್ತಿದೆ ಎಂದು ವಿಧಾನಪರಿಷತ್ತಿಗೆ ಮಾಹಿತಿ ನೀಡಿದರು. ರಾಜ್ಯದಲ್ಲಿ ಆಹಾರ ಭದ್ರತಾ ಕಾಯ್ದೆಯನ್ವಯ ಅಂತ್ಯೋದಯ ಪಡಿತರ ಚೀಟಿಗೆ ತಲಾ ೩೫ ಕೆಜಿ ಅಕ್ಕಿ  ಮತ್ತು ಆದ್ಯತಾ ಪಡಿತರ ಚೀಟಿಗೆ ಪ್ರತಿ ವ್ಯಕ್ತಿಗೆ ೫ ಕೆಜಿ ಅಕ್ಕಿ ವಿತರಿಸಲಾಗುತ್ತಿದೆ. ೨೦೨೨ ಡಿಸೆಂಬರ್ ಮಾಹೆಯಿಂದ ೩ ಕೆಜಿ ಅಕ್ಕಿ ಮತ್ತು ೨ ಕೆಜಿ ರಾಗಿ ಕೊಡಲಾಗುತ್ತಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ೧ ಕೋಟಿ ೨ ಲಕ್ಷ ಕುಟುಂಬಗಳಿಗೆ ೫ ಕೆಜಿ ಅಕ್ಕಿ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

**<><*<><>*><>**

ದೇಶಾದ್ಯಂತ ಇಂದು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ಆಯೋಜಿಸಲಾಗಿದೆ. ೧ ರಿಂದ ೧೯ ವರ್ಷದೊಳಗಿನ ವಿದ್ಯಾರ್ಥಿಗಳಲ್ಲಿ ಜಂತುಹುಳುವಿನ ಬಾಧೆಯನ್ನು ನಿವಾರಿಸುವ ಮಾತ್ರೆಗಳನ್ನು ವಿತರಿಸಲಾಗುತ್ತಿದೆ. ಇದಕ್ಕಾಗಿ ಅಂಗನವಾಡಿಗಳಿಂದ ಹಿಡಿದು ಪ್ರಥಮ ವರ್ಷದ ಪದವಿ ಕಾಲೇಜುಗಳವರೆಗೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮಕ್ಕಳ ಆರೋಗ್ಯಪೂರ್ಣ ಬೆಳವಣಿಗೆಗೆ ಅಡ್ಡಿ ಉಂಟುಮಾಡುವ ಜಂತುಹುಳಗಳ ನಿವಾರಣೆಗೆ ಆರು ತಿಂಗಳಿಗೊಮ್ಮೆ ಈ ಮಾತ್ರೆಗಳನ್ನು ನೀಡಲಾಗುತ್ತದೆ. ಸ್ವಚ್ಛತೆಯ ಪಾಲನೆಯ ಬಗ್ಗೆಯೂ ಮಕ್ಕಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಜಂತುಹುಳವನ್ನು ನಿಯಂತ್ರಿಸಿದರೆ ಶೇಕಡ ೭೦ರಷ್ಟು ರಕ್ತ ಹೀನತೆ ಸಮಸ್ಯೆಯನ್ನು ನಿಯಂತ್ರಿಸಲ ಸಾಧ್ಯವಾಗುತ್ತದೆ ಎಂದು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪಿ.ಸಿಕುಮಾರಸ್ವಾಮಿ ಹೇಳಿದರು. ಮೈಸೂರು ಜಿಲ್ಲೆಯಲ್ಲಿ ಈ ವರ್ಷ ೭ ಲಕ್ಷ ೧ ಸಾವಿರದ ೨೨೮ ಮಕ್ಕಳಿಗೆ ಜಂತು ನಿವಾರಣೆ ಮಾತ್ರೆಗಳನ್ನು ವಿತರಿಸಲಾಗುವುದು. ಆರೋಗ್ಯಾಧಿಕಾರಿಗಳು ಮತ್ತು ಶಿಕ್ಷಕರ ಸಲಹೆಯಂತೆ ಯಾವುದೇ ಆತಂಕವಿಲ್ಲದೆ ಮಕ್ಕಳಿಗೆ ನೀಡಬೇಕು ಎಂದು ಅವರು ಹೇಳಿದರು. ಕಲಬುರಗಿ ಜಿಲ್ಲೆಯಲ್ಲಿ ೧ ರಿಂದ ೧೯ ವರ್ಷದ ಮಕ್ಕಳಿಗೆ ಜಂತುಹುಳ ನಿವಾರಣೆ

ದಿನಾಚರಣೆ ಕಾರ್ಯಕ್ರಮ ನಡೆಯಿತು. ಮಕ್ಕಳ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಪ್ರತೀ ಆರು ತಿಂಗಳಿಗೊಮ್ಮೆ ಅಲ್ಬೆಂಡಾಜೋಲ್ ಮಾತ್ರೆಯನ್ನು ತಪ್ಪದೇ ಪಡೆಯಬೇಕು ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದರು.

**<><*<><>*><>**

ಭಾರತದ ಡಿಜಿಟಲ್ ಮೂಲ ಸೌಕರ್ಯವು ಅಭೂತಪೂರ್ವ ಬೆಳವಣಿಗೆ ಸಾಧಿಸಿದ್ದು, ಇಲ್ಲಿಯವರೆಗೆ ೧೩೮.೩೪ ಕೋಟಿ ಆಧಾರ್ ಸಂಖ್ಯೆಗಳು ನೋಂದಣಿಯಾಗಿವೆ. ಡಿಜಿ ಲಾಕರ್‌ನಂತಹ ಪ್ರಮುಖ ಡಿಜಿಟಲ್ ವೇದಿಕೆಗಳು ಈಗ ೭೭೬ ಕೋಟಿ ದಾಖಲೆಗಳೊಂದಿಗೆ ೩೭ ಸಾವಿರದ ೪೬ ಕೋಟಿ ಬಳಕೆದಾರರನ್ನು ಹೊಂದಿದೆ. ಇದೇ ವೇಳೆ ದೀಕ್ಷಾ ಶಿಕ್ಷಣ ವೇದಿಕೆಯು ೫೫೬.೩೭ ಕೋಟಿ ಕಲಿಕಾ ಸೆಷನ್‌ಗಳೊಂದಿಗೆ ೧೭.೯೫ ಕೋಟಿ ಕೋರ್ಸ್‌ಗಳಿದ್ದು, ಇದರಲ್ಲಿ ೧೪.೩೭ ಕೋಟಿಯಷ್ಟು ಪೂರ್ಣಗೊಂಡಿವೆ. ಭಾರತದ ಡಿಜಿಟಲ್ ಆರ್ಥಿಕತೆಯು ಕ್ಲೌಡ್ ಕಂಪ್ಯೂಟಿಂಗ್, ಎಐ ಮತ್ತು ಡಿಜಿಟಲ್ ಗವರ್ನ್ಸ್ ಆಧಾರಿತವಾಗಿವೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. ಇದೇ ವೇಳೆ ಯುಪಿಐ ವಹಿವಾಟು ನವೆಂಬರ್‌ನಲ್ಲಿ ೧೫.೪೮ ಶತಕೋಟಿ ತಲುಪಿದ್ದು, ೨೧.೫೫ ಲಕ್ಷ ಕೋಟಿ ರೂಪಾಯಿಗಳಷ್ಟು ಮೌಲ್ಯದ ವಹಿವಾಟು ನಡೆಸಿದೆ. ೨೦೨೫ ರ ವೇಳೆಗೆ ಯುಪಿಐ ಮಾಸಿಕ ವಹಿವಾಟು ೨೫ ಶತಕೋಟಿ ತಲುಪುವ ನಿರೀಕ್ಷೆಯಿದೆ. ಭಾರತದ ಡೇಟಾ ಸೆಂಟರ್ ವಲಯವು ಕ್ಷಿಪ್ರವಾಗಿ ವಿಸ್ತರಣೆಗೊಳ್ಳುತ್ತಿದ್ದು, ರಾಷ್ಟ್ರೀಯ ಡೇಟಾ ಕೇಂದ್ರಗಳು - ಎನ್‌ಡಿಸಿ ದೆಹಲಿ, ಪುಣೆ, ಭುವನೇಶ್ವರ್ ಮತ್ತು ಹೈದರಾಬಾದ್‌ನಲ್ಲಿ ಸೇವೆಗಳನ್ನು ಒದಗಿಸುತ್ತಿವೆ. ಸುಮಾರು ೩೦೦ ಸರ್ಕಾರಿ ಇಲಾಖೆಗಳು ಈಗ ಕ್ಲೌಡ್ ಸೇವೆಗಳನ್ನು ಬಳಸುತ್ತಿವೆ. ಮುಖ್ಯವಾಗಿ ಉಮಂಗ್, ಕೋವಿನ್ ಮತ್ತು ಆರೋಗ್ಯ ಸೇತುನಂತಹ ವೇದಿಕೆಗಳು ಭಾರತದ ಡಿಜಿಟಲ್ ಸೌಲಭ್ಯದ ಸಾಮರ್ಥ್ಯವನ್ನು ವೃದ್ಧಿಸಿದೆ.

**<><*<><>*><>**

ವಿವಿಧ ಕ್ಷೇತ್ರಗಳಲ್ಲಿ ದಿನನಿತ್ಯ ಜೀವನದಲ್ಲಿ ಎದುರಾಗುವ ಕೆಲವು ಪ್ರಮುಖ ಸವಾಲುಗಳಿಗೆ ವಿನೂತನ ಪರಿಹಾರ ಕಂಡುಕೊಳ್ಳುವತ್ತ ದೇಶದ ವಿದ್ಯಾರ್ಥಿ ಸಮುದಾಯವನ್ನು ಉತ್ತೇಜಿಸಲು ನಡೆಸಲಾಗುವ 'ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್' ನ ಪ್ರಸಕ್ತ ಸಾಲಿನ ಆವೃತ್ತಿಯು ನಾಡಿದ್ದು ೧೧ ನೇ ತಾರೀಖಿನಿಂದ ಎರಡು ದಿನ ದೇಶಾದ್ಯಂತ ನಡೆಯಲಿದೆ. ವಿದ್ಯಾರ್ಥಿ ಸಮುದಾಯದ ವಿನೂತನ ಮತ್ತು ಸೃಜನಾತ್ಮಕ ಪರಿಹಾರೋಪಾಯಗಳನ್ನು ನೈಜ ಪ್ರಪಂಚದ ಸಮಸ್ಯೆಗಳಿಗೆ ಬಳಸಬಹುದಾದ ಸಾಧ್ಯತೆಗಳಿಗೆ ಈ ಚಟುವಟಿಕೆ ಅತ್ಯುತ್ತಮ ವೇದಿಕೆಯನ್ನು ಕಲ್ಪಿಸಲಿದೆ. ವಿಶೇಷವಾಗಿ ಇಂಜಿನಿಯರ್ ವಿದ್ಯಾರ್ಥಿಗಳು ಸೇರಿದಂತೆ ಯುವಜನತೆ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಉದ್ದಿಮೆಗಳ ತಜ್ಞರು, ಸರ್ಕಾರಿ ಸಂಸ್ಥೆಗಳ ಅನುಭವಿ ಅಧಿಕಾರಿಗಳೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳುವ ಪೂರ್ವ ಅವಕಾಶವನ್ನು ಹ್ಯಾಕಥಾನ್ ಯುವಜನರಿಗೆ ಕಲ್ಪಿಸುತ್ತದೆ. ಸೈಬರ್ ಭದ್ರತೆ, ವಿನೂತನ ಶಿಕ್ಷಣ ಪದ್ಧತಿ, ವಿಕೋಪ ನಿರ್ವಹಣೆ, ನಮ್ಮ ನಾಗರಿಕತೆ, ಇತಿಹಾಸ ಮತ್ತು ಸಂಸ್ಕೃತಿಯನ್ನು ಆಧರಿಸಿದ ಹೊಸ ಮಾದರಿಯ ಆಟಿಕೆಗಳು ಮತ್ತು ಆಟೋಟಗಳನ್ನು ಅಭಿವೃದ್ಧಿಪಡಿಸುವುದು. ಆತಿಥ್ಯ, ಮನರಂಜನೆ ಮೊದಲಾದ ಕ್ಷೇತ್ರಗಳಿಗೆ ತಂತ್ರಜ್ಞಾನ ಆಧರಿತ ಉಪಾಯಗಳನ್ನು ರೂಪಿಸುವುದು, ಹಣಕಾಸು ಸೇವೆಗಳಿಗೆ ಸಂಬಂಧಿಸಿದ ಸವಾಲುಗಳ ನಿರ್ವಹಣೆ,

ಕೃತಕಬುದ್ಧಿಮತ್ತೆಯನ್ನು ಬಳಸಿಕೊಳ್ಳುವ ಸುಧಾರಿತ ತಂತ್ರಜ್ಞಾನ ಆಧರಿತ ಚಿಂತನೆಗಳು, ದೈಹಿಕ ಸಾಮರ್ಥ್ಯ ಉತ್ತೇಜಿಸುವ ಚಟುವಟಿಕೆಗಳು, ಬಾಹ್ಯಾಕಾಶ ತಂತ್ರಜ್ಞಾನ, ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಆಲೋಚನೆಗಳು, ಆರೋಗ್ಯ ರಕ್ಷಣೆ, ಕೃಷಿ, ಗ್ರಾಮೀಣಾಭಿವೃದ್ಧಿ, ಆಹಾರ ತಂತ್ರಜ್ಞಾನ, ಅತ್ಯಾಧುನಿಕ ವಾಹನಗಳ ಸೃಷ್ಟಿ, ಸಾರಿಗೆ ಮತ್ತು ಸಾಗಣೆ ವಲಯಕ್ಕೆ ಪೂರಕವಾದ ರೋಬಾಟ್ ಹಾಗೂ ಡ್ರೋಣ್‌ಗಳ ಬಳಕೆ, ಸ್ವಚ್ಛ ಮತ್ತು ಹಸಿರು ತಂತ್ರಜ್ಞಾನ, ಪ್ರವಾಸೋದ್ಯಮ, ನವೀಕರಿಸಬಹುದಾದ ಮತ್ತು ಸುಸ್ಥಿರ ಇಂಧನ ಮೂಲಗಳನ್ನು ಕಂಡುಕೊಳ್ಳುವುದು ಇವೇ ಮೊದಲಾದ ವಲಯಗಳಲ್ಲಿ ಯುವಜನತೆ ತಮ್ಮ ಹೊಸ ಹೊಸ ಚಿಂತನೆಗಳು ಮತ್ತು ಬುದ್ಧಿಶಕ್ತಿಯನ್ನು ಬಿಂಬಿಸಿಕೊಳ್ಳಲು ಹ್ಯಾಕಥಾನ್ ನೆರವಾಗಲಿದೆ. ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ನ ಏಳನೇ ಆವೃತ್ತಿಯನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಈ ಕಾರ್ಯಕ್ರಮವನ್ನು ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ. ಈ ವರ್ಷ, ೫೪ ಸಚಿವಾಲಯಗಳು, ಇಲಾಖೆಗಳು, ರಾಜ್ಯ ಸರ್ಕಾರಗಳು, ಸಾರ್ವಜನಿಕ ವಲಯದ ಘಟಕಗಳು ಮತ್ತು ಕೈಗಾರಿಕೆಗಳು, ಪ್ರಸ್ತುತ ನಮ್ಮ ದೇಶ ಎದುರಿಸುತ್ತಿರುವ ೨೫೦ ಕ್ಕೂ ಹೆಚ್ಚು ಸವಾಲುಗಳ ಪಟ್ಟಿಯನ್ನು ಸಲ್ಲಿಸಿವೆ.  ರಾಜ್ಯದಲ್ಲಿ ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ - ಎನ್ಐಇ ಹಾಗೂ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಗಳು ನೋಡಲ್ ಕೇಂದ್ರಗಳಾಗಿವೆ.

**<><*<><>*><>**

ಚಿಕ್ಕಮಗಳೂರು ಜಿಲ್ಲೆಯಲ್ಲಿ ದತ್ತ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ದೊರೆತಿದ್ದು, ಕಾರ್ಯಕ್ರಮಕ್ಕೆ ಎಲ್ಲಾ ರೀತಿಯ ಸಿದ್ದತೆಗಳನ್ನು ಜಿಲ್ಲಾಡಳಿತ ಮಾಡಿಕೊಂಡಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದಾರೆ.

**<><*<> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <>*><>**

**ನಮ್ಮ ಮುಂದಿನ ವಾರ್ತಾ ಪ್ರಸಾರ ಸಂಜೆ ೬.೪೦ ಕ್ಕೆ**